# 11k varieties of paddy grown as part of research in Mandya

SIDDU R G HALLI
MANDYA, DHNS

The zonal agricultural research centre under the canopy of University of Agricultural Sciences-Bangalore, located at VC Farm in Mandya taluk, has conducted a significant research by cultivating 11,290 varieties of paddy at one place.

Thousands of local varieties like Karichippiga, Gowri Sanna, Gidda Bangaracovi, Parimala Sanna, Jeerige Sanna, Siddasale, Nandi and also from other states like Ambemohar, Kalajeera, Kalanamak, and Mappillai Samba have been grown.

A team of agriculture scientists are monitoring these rare varieties, against pest attack and diseases.

According to the researchers, the development of high-yielding rice varieties, after the 'Green Revolution', led to a decline in local varieties in the country. The responsibility of preserving invaluable local varieties lies with the 'National Bureau of Plant Genetic Resources' (NBPGR), New Delhi. Therefore, all rice varieties are collected and stored here.

The Department of Biotechnology, a division of the union government, has launched a programme to develop improved varieties of crops with higher yield and disease-resistant properties. This focuses on the conservation of indigenous varieties, studying their characteristics and conducting research on their useful genetic traits.

Fourteen agriculture research organisations and state agriculture universities have joined hands for the research programme.

The main objective is to analyse the characteristics of 11,000 rice varieties, and testing their resistance to various diseases. Its distinctiveness and stability traits would be studied and useful elements will be transferred to new ones, according to C A Deepak, a scientist at VC Farm.



**Paddy varieties grown for research at VC Farm near Mandya city.** DH PHOTO

08-11-2024
Dec Hrd Pg 3D

For more information visit
University Library Website
Web - uasbagrilibindia.org
E-mail- librarian@uasbangalore.edu.in

08-11-2024
Prajavani Pg 02

ಮೂರು ಜಿಲ್ಲೆಗಳಲ್ಲಿ ಪ್ರಾಯೋಗಿಕ ಆರಂಭಕ್ಕೆ ಸಿದ್ಧತೆ • ತಂತ್ರಜ್ಞಾನ, ಸಹಾಯಧನಗಳ ಸಲಹೆ

# ತೋಟಗಾರಿಕೆಗೆ 'ಕಿಸಾನ್ ಮಾಲ್' ಬೆಳಕು

• ಖಲೀಲಅಹ್ಮದ ಶೇಖ

ಬೆಂಗಳೂರು: ತೋಟಗಾರಿಕೆ ಕ್ಷೇತ್ರಕ್ಕೆ ಸಂಬಂಧಿಸಿದ ತಾಂತ್ರಿಕ ಸಲಹೆ, ಮಾರುಕಟ್ಟೆ ಸಂಪರ್ಕ, ಬೇಸಾಯ ಪರಿಕರಗಳ ಮತ್ತು ಉತ್ಪನ್ನಗಳನ್ನು ಒಂದೇ ಸೂರಿನಡಿ ಒದಗಿಸುವ 'ಮೈಸೂರು ಕಿಸಾನ್ ಮಾಲ್'ಗಳನ್ನು ಮೈಸೂರು, ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಲು ತೋಟಗಾರಿಕೆ ಇಲಾಖೆ ಸಿದ್ಧತೆ ನಡೆಸಿದೆ.



ರಮೇಶ್ ಡಿ.ಎಸ್.

2024–25ರ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಕಿಸಾನ್ ಮಾಲ್'ಗಳನ್ನು ಪ್ರಾರಂಭಿಸುವುದಾಗಿ ಘೋಷಿಸಿದ್ದರು. ರೈತ ಉತ್ಪಾದಕ ಸಂಸ್ಥೆಗಳ (ಎಫ್‌ಪಿಒ) ಸಹಭಾಗಿತ್ವದಲ್ಲಿ ಈ ಯೋಜನೆ ಅನುಷ್ಠಾನಕ್ಕೆ ತೋಟಗಾರಿಕಾ ಇಲಾಖೆ ಸಜ್ಜಾಗಿದೆ. ಎರಡು ತಿಂಗಳಲ್ಲಿ 'ಕಿಸಾನ್ ಮಾಲ್'ಗಳು ಕಾರ್ಯಾರಂಭ ಮಾಡಲಿದ್ದು, ಅವುಗಳ ಯಶಸ್ಸನ್ನು ಆಧರಿಸಿ ಇನ್ನೂ ಏಳು ಜಿಲ್ಲೆಗಳಿಗೆ ಯೋಜನೆ ವಿಸ್ತರಿಸುವ ಪ್ರಸ್ತಾವ ಇಲಾಖೆ ಮುಂದಿದೆ.

ಬೀಜ, ಸಸ್ಯ ಪೋಷಕಾಂಶಗಳು, ರಾಸಾಯನಿಕ, ಎರೆಹುಳು, ಜೈವಿಕ ಗೊಬ್ಬರಗಳು, ಬೆಳೆ ಹಾರ್ಮೋನುಗಳು, ಕೃಷಿ ಪರಿಕರಗಳು, ಕೀಟ ನಾಶಕಗಳು, ಮಾರುಕಟ್ಟೆ ಸಂಪರ್ಕ, ತಾಂತ್ರಿಕ ಸಲಹೆ ಸೇರಿದಂತೆ ತೋಟಗಾರಿಕೆ ಬೆಳೆಗಳಿಗೆ ಬೇಕಾದ ಎಲ್ಲ ಸೌಲಭ್ಯಗಳನ್ನು ಒಂದೇ ಸೂರಿನಡಿ ರೈತರಿಗೆ ಕಲ್ಪಿಸುವುದು ಈ ಮಾಲ್‌ಗಳ ಉದ್ದೇಶವಾಗಿದೆ. ಇಲ್ಲಿ ಕಾರ್ಯನಿರ್ವಹಿಸುವ ವಿಷಯ ತಜ್ಞರು ರೈತರಿಗೆ ಬೆಳೆ ನಿರ್ವಹಣೆ, ಕೀಟ ಮತ್ತು ರೋಗಗಳ ನಿರ್ವಹಣೆ ಮಾಡುವುದರ ಕುರಿತು ಸಲಹೆಗಳನ್ನೂ ನೀಡಲಿದ್ದಾರೆ.

ಕಿಸಾನ್ ಮಾಲ್‌ನ ಸಿಬ್ಬಂದಿ ರೈತರು ಬೆಳೆದ ಉತ್ಪನ್ನಗಳ ಮಾರಾಟಕ್ಕೆ ಸೂಕ್ತ ಮಾರ್ಗದರ್ಶನ ಮಾಡುತ್ತಾರೆ. ವಿವಿಧ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯದ ಮಾಹಿತಿ ನೀಡುವುದು, ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ ಕೊಯ್ಲೋತ್ತರ ತಂತ್ರಜ್ಞಾನ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ದೊರಕುವ ಸಹಾಯಧನಗಳ ಬಗ್ಗೆಯೂ ಸಲಹೆ ನೀಡುತ್ತಾರೆ.

'ಒಂದು ಕಿಸಾನ್ ಮಾಲ್ ಪ್ರಾರಂಭಿಸಲು ಒಟ್ಟು ₹ 30 ಲಕ್ಷ ಅನುದಾನ ಒದಗಿಸಲಾಗುತ್ತದೆ. ಇಲ್ಲಿ ಕಾರ್ಯನಿರ್ವಹಿಸುವ ವ್ಯವಸ್ಥಾಪಕರು, ತಾಂತ್ರಿಕ ಸಲಹೆಗಾರರು ಹಾಗೂ ಕಚೇರಿ ಸಿಬ್ಬಂದಿ ವೇತನಕ್ಕೆ ₹ 15 ಲಕ್ಷ ಹಾಗೂ ಕಿಸಾನ್ ಮಾಲ್‌ನ ಕಟ್ಟಡದ ನವೀಕರಣ ಸೇರಿದಂತೆ ಮೂಲಸೌಕರ್ಯ ಕಲ್ಪಿಸಲು ₹ 15 ಲಕ್ಷ ಅನುದಾನ ನೀಡಲಾಗುತ್ತದೆ. ಈ ಮಾಲ್‌ಗಳನ್ನು ನಿರ್ವಹಿಸುವ ಎಫ್‌ಪಿಒಗಳ ಮೂಲಕ ನಿರ್ವಹಣೆ ಮಾಡಲಾಗುತ್ತದೆ' ಎಂದು ತೋಟಗಾರಿಕೆ ಇಲಾಖೆ ನಿರ್ದೇಶಕ ರಮೇಶ್ ಡಿ.ಎಸ್. ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಮಾಲ್‌ಗಳನ್ನು ನಡೆಸಲು ಆಯಾ ಜಿಲ್ಲೆಗಳಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿರುವ ಎಫ್‌ಪಿಒಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಎರಡು ತಿಂಗಳಲ್ಲಿ ಎಲ್ಲ ಪ್ರಕ್ರಿಯೆ ಪೂರ್ಣಗೊಳ್ಳಲಿದೆ' ಎಂದು ತಿಳಿಸಿದರು.

## 'ಕೈಗೆಟುಕುವ ಬೆಲೆಯಲ್ಲಿ ತೋಟಗಾರಿಕಾ ಉತ್ಪನ್ನಗಳು'

'ತೋಟಗಾರಿಕಾ ಬೆಳೆಗಳಿಗೆ ಸಂಬಂಧಿಸಿದ ಬೀಜ, ಸಸಿಗಳಿಂದ ಪ್ರಾರಂಭಿಸಿ ಕೊಯ್ಲೋತ್ತರ ತಂತ್ರಜ್ಞಾನದವರೆಗೆ ಎಲ್ಲ ರೀತಿಯ ಗುಣಮಟ್ಟದ ಉತ್ಪನ್ನಗಳನ್ನು ಕೈಗೆಟುಕುವ ಬೆಲೆಯಲ್ಲಿ ಮಾರಾಟ ಮಾಡಲಾಗುತ್ತದೆ. ಕಿಸಾನ್ ಮಾಲ್ ಎಂಬ ಸೇವಾಕೇಂದ್ರಗಳ ಮೂಲಕ ರೈತರಿಗೆ ತಂತ್ರಜ್ಞಾನ ಆಧಾರಿತ ತಾಂತ್ರಿಕ ಸಲಹೆಗಳನ್ನು ನೀಡಲಾಗುತ್ತದೆ' ಎಂದು ತೋಟಗಾರಿಕೆ ಇಲಾಖೆ ನಿರ್ದೇಶಕ ರಮೇಶ್ ಡಿ.ಎಸ್. ಅವರು 'ಪ್ರಜಾವಾಣಿ'ಗೆ ತಿಳಿಸಿದರು.

**ಎರಡನೇ ಹಂತದಲ್ಲಿ**

ಎಲ್ಲಿ ಕಿಸಾನ್ ಮಾಲ್
ಮದ್ದೂರು, ಮಂಡ್ಯ ಜಿಲ್ಲೆ
ಶಿವಮೊಗ್ಗ ,ಚಿಕ್ಕಬಳ್ಳಾಪುರ,
ಬಾಗಲಕೋಟೆ, ಬಳ್ಳಾರಿ,ಕೊಪ್ಪಳ

## ಮುಖ್ಯಾಂಶಗಳು

- ಮಣ್ಣು–ನೀರು ಪರೀಕ್ಷೆಗೆ ಸಂಬಂಧಿಸಿದ ವರದಿಗಳ ವಿಶ್ಲೇಷಣೆ
- ರೈತರಿಗೆ ತರಬೇತಿ, ಕಾರ್ಯಾಗಾರ ಹಾಗೂ ವಿಚಾರಸಂಕಿರಣ
- ಸಾಮಾಜಿಕ ಜಾಲತಾಣಗಳ ಮೂಲಕ ತೋಟಗಾರಿಕೆ ಉತ್ಪನ್ನಗಳ ಮಾರಾಟ
- ರೈತರ ಪ್ರಶ್ನೆಗಳಿಗೆ ಪರಿಹಾರ ಮತ್ತು ಮಾರ್ಗದರ್ಶನ ಮಾಡುವುದು


08-11-2024
Prajavani Pg 04

ವಿವಿಧ ಕ್ಷೇತ್ರಗಳಿಗೆ ಶೇ15 ರಿಂದ 25ರಷ್ಟು ಸಹಾಯಧನ • ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಉಲ್ಲೇಖ

# ರೈತನೂ ಇನ್ನು 'ಕೃಷಿ ಪ್ರವಾಸೋದ್ಯಮಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ರೈತರು ಇನ್ನು ಮುಂದೆ ಬೇಸಾಯದ ಜೊತೆಗೆ ಪ್ರವಾಸೋದ್ಯಮದ ಮೂಲಕವೂ ಒಂದಷ್ಟು ಆದಾಯವನ್ನು ಗಳಿಸಬಹುದಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರ ವಿನೂತನ 'ಕೃಷಿ ಪ್ರವಾಸೋದ್ಯಮ'ವನ್ನು ಪರಿಚಯಿಸಲಿದೆ.



ರೈತರು ತಮ್ಮ ಹೊಲ ಅಥವಾ ತೋಟಗಳಲ್ಲಿ ಕೃಷಿ ಆಸಕ್ತ ಪ್ರವಾಸಿಗರಿಗೆ ಕೃಷಿ ಚಟುವಟಿಕೆಗಳನ್ನು ಪರಿಚಯಿಸುವ ಜತೆಗೆ, ಆತಿಥ್ಯ ನೀಡಬಹುದು. ಊಟ, ತಿಂಡಿ, ವಾಸ್ತವ್ಯಕ್ಕೆ ದರವನ್ನೂ ನಿಗದಿ ಮಾಡಬಹುದು. ಹೊಸ ಪ್ರವಾಸೋದ್ಯಮ ನೀತಿಯು ಕೃಷಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಹಲವು ಅಂಶಗಳನ್ನು ಒಳಗೊಂಡಿದೆ.

ಕೃಷಿ ಪ್ರವಾಸೋದ್ಯಮ ನಡೆಸುವವರು ಸ್ವತಃ ರೈತರೇ ಆಗಿರಬೇಕು. ಅಲ್ಲದೇ, ಬೇಸಾಯ ನಡೆಸುತ್ತಿರಬೇಕು. ತೋಟ, ಗಾರ್ಡನ್, ಮೀನು ಸಾಕಣೆ ಕೊಳ, ರೇಷ್ಮೆ, ಪುಷ್ಪೋದ್ಯಮ ಅಥವಾ ಪಶು ಸಂಗೋಪನೆ ನಡೆಸುತ್ತಿರಬೇಕು. ಅತಿಥಿಗಳಾಗಿ ಬರುವವರಿಗೆ ಉಳಿದುಕೊಳ್ಳಲು 12 ಹಾಸಿಗೆಗಳ ಸಾಮರ್ಥ್ಯದ 6 ಕೊಠಡಿಗಳನ್ನು ಹೊಂದಿರಬೇಕು. ವಾಸ್ತವ್ಯದ ಕಟ್ಟಡವು ಒಟ್ಟು ಕೃಷಿ ಭೂಮಿಯ ಶೇ 10ರಷ್ಟನ್ನು ಮೀರಬಾರದು. ಆದರೆ, ಕೃಷಿ ಪ್ರವಾಸೋದ್ಯಮ ನಡೆಸುವವರಿಗೆ ಹೆಚ್ಚುವರಿಯಾಗಿ ವಿದ್ಯುತ್ ಮತ್ತು ನೀರಿನ ಶುಲ್ಕ ವಿಧಿಸುವುದಿಲ್ಲ.

ಕೃಷಿ ಪ್ರವಾಸೋದ್ಯಮ ಯೋಜನೆಯಡಿ ರೈತ, ಕೃಷಿ ಉತ್ಪಾದನಾ ಸಂಘಟನೆಗಳು ಅಥವಾ ಕೃಷಿ ಉತ್ಪನ್ನಗಳ ಉತ್ಪಾದನಾ ಸೊಸೈಟಿಗಳಿಗೆ ಸಹಾಯಧನ ನೀಡಲಾಗುತ್ತದೆ.

**ಸಹಾಯಧನದ ಜತೆಗೆ ವಿನಾಯಿತಿ:** ಹೊಸ ಬಗೆಯ ಪ್ರವಾಸೋದ್ಯಮಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಸಹಾಯ ಧನ, ಮುದ್ರಾಂಕ ಶುಲ್ಕ ವಿನಾಯಿತಿ, ತೆರಿಗೆ ವಿನಾಯಿತಿ ಸೇರಿ ವಿವಿಧ ರೀತಿಯ ಪ್ರೋತ್ಸಾಹಗಳನ್ನು ನೀತಿಯು ಒಳಗೊಂಡಿದೆ.

ಅದರಲ್ಲೂ ವಿಶೇಷವಾಗಿ ಸಾಹಸ, ಕ್ಯಾರವಾನ್, ಕ್ಯಾರವಾನ್ ಪಾರ್ಕ್, ಕ್ರೂಸ್, ಹೌಸ್ ಬೋಟ್, ವೆಲ್‌ನೆಸ್ ಸೆಂಟರ್ ಶೇ 25ರಷ್ಟು, ಪ್ರವಾಸೋದ್ಯಮ ಉದ್ದೇಶದ ಸಣ್ಣ ಐಷಾರಾಮಿ ಹೋಟೆಲ್‌ಗಳಿಗೆ ಶೇ15ರಷ್ಟು ಸಹಾಯಧನವನ್ನು ಪ್ರವಾಸೋದ್ಯಮ ನೀತಿಯಲ್ಲಿ ಪ್ರಕಟಿಸಲಾಗಿದೆ.

ಸಾಹಸ ಪ್ರವಾಸೋದ್ಯಮ ಯೋಜನೆಯಲ್ಲಿ ಕನಿಷ್ಠ ₹25 ಲಕ್ಷ ಗರಿಷ್ಠ ₹2 ಕೋಟಿ, ಕೃಷಿ ಪ್ರವಾಸೋದ್ಯಮದಲ್ಲಿ ಕನಿಷ್ಠ ₹10 ಲಕ್ಷ ಗರಿಷ್ಠ ₹50 ಲಕ್ಷ, ಕ್ಯಾರವಾನ್ ಪಾರ್ಕ್ ಪ್ರಾಜೆಕ್ಟ್‌ನಲ್ಲಿ ಕನಿಷ್ಠ ₹25 ಲಕ್ಷ ಗರಿಷ್ಠ ₹2 ಕೋಟಿ, ಕ್ರೂಸ್ ಟೂರಿಸಂನಲ್ಲಿ ಕನಿಷ್ಠ ₹25 ಲಕ್ಷ ಗರಿಷ್ಠ ₹1 ಕೋಟಿ, ವೆಲ್‌ನೆಸ್ ಸೆಂಟರ್ ₹2 ಕೋಟಿ, ಐಷಾರಾಮಿ ಹೋಟೆಲ್‌ಗಳು (ಒನ್ ಸ್ಟಾರ್‌ನಿಂದ ತ್ರೀಸ್ಟಾರ್‌ವರೆಗೆ) ₹10 ಕೋಟಿ ಮಿತಿಯಲ್ಲಿ ಹೂಡಿಕೆ ಮಾಡಿದರೆ ಸಹಾಯಧನ ಸಿಗುತ್ತದೆ.

ಆದರೆ, ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಬಿಬಿಎಂಪಿ ವ್ಯಾಪ್ತಿಯಲ್ಲಿ ಬಂಡವಾಳದ ಮೇಲಿನ ಸಹಾಯಧನ ಅನ್ವಯವಾಗುವುದಿಲ್ಲ.

**ಶೇ 50ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ:** ಹೊಸ ಪ್ರವಾಸೋದ್ಯಮ ಯೋಜನೆಗಳನ್ನು ಆರಂಭಿಸುವವರು ಮತ್ತು ವಿಸ್ತರಣೆ ಮಾಡುವವರಿಗೆ ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ ಸಿಗಲಿದೆ.

ರಾಜ್ಯ ಸರ್ಕಾರ, ರಾಜ್ಯ ಹಣಕಾಸು ನಿಗಮ, ರಾಷ್ಟ್ರ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕ್‌ಗಳು, ಗ್ರಾಮೀಣ ಬ್ಯಾಂಕ್ ಮತ್ತಿತರ ಹಣಕಾಸು ಸಂಸ್ಥೆಗಳಲ್ಲಿ ಪಡೆಯುವಾಗ, ಸಾಲದ ಒಪ್ಪಂದ, ಸಾಲ ಪತ್ರ, ಅಡಮಾನ ಪತ್ರಗಳಿಗೆ ಮುದ್ರಾಂಕ ಶುಲ್ಕದಲ್ಲಿ ಶೇ50ರಷ್ಟು ವಿನಾಯಿತಿ ನೀಡಲಾಗುವುದು. ಈ ವಿನಾಯಿತಿ ಗುತ್ತಿಗೆ ಪತ್ರ, ಗುತ್ತಿಗೆ ಮತ್ತು ಮಾರಾಟ ಪತ್ರ, ಉಪಗುತ್ತಿಗೆ, ಶುದ್ಧಕ್ರಮ ಪತ್ರಗಳಿಗೂ ಅನ್ವಯವಾಗುತ್ತದೆ.

ನೋಂದಣಿ ಶುಲ್ಕವನ್ನು ಶೇ100ರಷ್ಟು ಮರುಪಾವತಿ ಮಾಡಲಾಗುತ್ತದೆ. ಪ್ರವಾಸೋದ್ಯಮ ಯೋಜನೆಗಾಗಿ ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿಯಾಗಿ ಪರಿವರ್ತಿಸಿದರೆ ಪರಿವರ್ತನಾ ಶುಲ್ಕವನ್ನೂ ಮರುಪಾವತಿಸಲಾಗುವುದು.

## ಹೋಂ ಸ್ಟೇಗಳಿಗೆ ಉತ್ತೇಜನ

- ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿ ಮಾಡಿಕೊಳ್ಳುವ ಹೋಂ ಸ್ಟೇಗಳಿಗೆ ಹಲವು ರೀತಿ ರಿಯಾಯಿತಿಗಳನ್ನು ಪ್ರಕಟಿಸಲಾಗಿದೆ
- ವಿದ್ಯುತ್ ಮತ್ತು ನೀರಿನ ಶುಲ್ಕವನ್ನು ಗೃಹ ಬಳಕೆಯ ಆಧಾರದಲ್ಲೇ ವಿಧಿಸಲಾಗುವುದು. ವಾಣಿಜ್ಯ ದರವನ್ನು ವಿಧಿಸುವುದಿಲ್ಲ
- ಸ್ವತ್ತು ತೆರಿಗೆಯನ್ನೂ ವಾಣಿಜ್ಯ ದರದಲ್ಲಿ ವಿಧಿಸದೇ, ಮನೆಗಳಿಗೆ ನಿಗದಿ ಮಾಡುವ ದರದಲ್ಲೇ ಪಾವತಿಸಲು ಅವಕಾಶ
- ಹೋಂ ಸ್ಟೇ ವ್ಯಾಖ್ಯಾನಕ್ಕೆ ಅನುಗುಣವಾಗಿ ವಾಸ್ತವ್ಯದ ಕೊಠಡಿಗಳಿಗಾಗಿ ಭೂಬದಲಾವಣೆ ಮಾಡುವ ಅಗತ್ಯವೂ ಇಲ್ಲ

## ಮಹಿಳೆ ಮತ್ತು ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಹೆಚ್ಚಿನ ಸಹಾಯಧನ

ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪಂಗಡದವರು ಹಾಗೂ ಅಂಗವಿಕಲರು ಪ್ರವಾಸೋದ್ಯಮ ಯೋಜನೆಗಳನ್ನು ನಡೆಸಿದರೆ ಶೇ 5ರಷ್ಟು ಹೆಚ್ಚುವರಿ ಸಹಾಯಧನ ನೀಡಲಾಗುವುದು.

ಅಲ್ಲದೇ, ಹೋಟೆಲ್ ಯೋಜನೆಗಳನ್ನು ಕಲ್ಯಾಣ ಕರ್ನಾಟಕ ಪ್ರದೇಶದ ಬೀದರ್, ಬಳ್ಳಾರಿ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯನಗರ ಮತ್ತು ಯಾದಗಿರಿ, ಕಿತ್ತೂರು ಕರ್ನಾಟಕದ ಪ್ರದೇಶದ ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ವಿಜಯಪುರ, ಬಾಗಲಕೋಟೆ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಆರಂಭಿಸಿದರೆ ಹೆಚ್ಚುವರಿಯಾಗಿ ಶೇ 5ರಷ್ಟು ಸಹಾಯಧನ ಸಿಗಲಿದೆ.

---

ಕೆಪಿಪಿಯಿಂದ ಸಾವಯವ ಕೃಷಿ ಲೋಕದಲ್ಲೊಂದು ಮೌನ ಕ್ರಾಂತಿ | ಅಡಕೆ ಎಲೆ ಚುಕ್ಕೆ ರೋಗಕ್ಕೆ ಸಂಬಂಧಿಸಿದ ಸಂಶೋಧನೆ

# ನೆದರ್‌ಲ್ಯಾಂಡ್ಸ್‌ನ ಇಟಿಸಿ ಕಾಂಪಾಸ್ ಪ್ರಾಜೆಕ್ಟ್‌ನ ಪಾಲುದಾರ

ನೆಲ್ಲಿಜೆ ನವ್ಯಜ್ಯೋತಿ

**ಬೆಂಗಳೂರು:** ಕೃಷಿ ಪ್ರಯೋಗ ಪರಿವಾರ (ಕೆಪಿಪಿ)ದ ದೃಷ್ಟಿ ಮತ್ತು ಉದ್ದೇಶ ವಿಸ್ತರಿಸಲಾಗಿದೆ. ಪ್ರಾಯೋಗಿಕ ಅಭಿವೃದ್ಧಿ ಕಾರ್ಯತಂತ್ರಗಳನ್ನು ಅಭಿವೃದ್ಧಿ ಪಡಿಸುವ ಗುರಿ ಹೊಂದಿರುವ ಇದು ಆರ್ಥಿಕ ಮಾತ್ರವಲ್ಲದೇ ನೈತಿಕ, ಆಧ್ಯಾತ್ಮಿಕ ಮತ್ತು ಪರಿಸರ ಮೌಲ್ಯಗಳನ್ನೂ ಆಧರಿಸಿದೆ.

ಕೆಪಿಪಿ ಸ್ಥಳೀಯ ಜನರ ಅಭಿವೃದ್ಧಿಗೆ ಬೆಂಬಲ ನೀಡಲು ಹಲವಾರು ಕ್ಷೇತ್ರ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಕೆಪಿಪಿ ನೋಂದಣಿಯಾದ ಎರಡೇ ವರ್ಷದಲ್ಲಿ 1998ರಿಂದ 2010ರ ನಡುವೆ ನೆದರ್‌ಲ್ಯಾಂಡ್ಸ್‌ನ ಇಟಿಸಿ ಕಾಂಪಾಸ್ ಪ್ರಾಜೆಕ್ಟ್‌ನ ಪಾಲುದಾರರಾಗಿತ್ತು. ಕಾಂಪಾಸ್‌ನೊಳಗೆ ಕೆಪಿಪಿ



ಮುಖ್ಯ ಉದ್ದೇಶವೆಂದರೆ ಸ್ಥಳೀಯ ಜ್ಞಾನ, ತಂತ್ರಗಳು ಸ್ಥಳೀಯ ಸಂಸ್ಥೆಗಳು ಹೇಗೆ ಗ್ರಾಮವಿಕಾಸವನ್ನು ಹೆಚ್ಚಿಸುತ್ತವೆ ಎಂಬುದನ್ನು ಅರ್ಥಮಾಡಿ ಕೊಳ್ಳುವುದಾಗಿತ್ತು. ಗ್ರಾಮ ವಿಕಾಸ ಚಟುವಟಿಕೆಗಳು ಗ್ರಾಮೀಣ ಜೀವನದ ವಿವಿಧ ಮುಖಗಳಲ್ಲಿ ನಿರ್ದೇಶಿಸಲ್ಪಡುತ್ತವೆ.

**ಎಲೆಚುಕ್ಕೆ ರೋಗಕ್ಕೆ ಸಂಶೋಧನೆ:** ಕೆಪಿಪಿ ರೈತರ ಜಮೀನಿನಲ್ಲಿ ಕೃಷಿ ಪ್ರಯೋಗಗಳನ್ನು ನಡೆಸುತ್ತದೆ. ಇದಕ್ಕೆ ಕೃಷಿ ವಿಜ್ಞಾನಿಗಳು ಮಾರ್ಗದರ್ಶನ ಮಾಡುತ್ತಾರೆ. ಈ ಪ್ರಯೋಗಗಳು ಗೋಮೂತ್ರ, ದ್ರವರೂಪದ ಗೊಬ್ಬರಗಳ ಪರಿಣಾಮ ಹಾಗೂ ಬೆಳೆಗಳ ಮೇಲೆ ಚಂದ್ರನ ಚಲನೆಯ ಪ್ರಭಾವದ ಮೇಲೆ ನಡೆಯುತ್ತವೆ. ವೃಕ್ಷಾಯುರ್ವೇದದ ಸುಳಿವು ಆಧರಿಸಿ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನಲ್ಲಿ ಅಡಕೆಯ ಹಳದಿ ಎಲೆ ರೋಗ ಕುರಿತು ಪರಿವಾರ ಪ್ರಯೋಗ ನಡೆಸಿದೆ. ಪ್ರಸ್ತುತ ಈ ಪ್ರದೇಶದಲ್ಲಿ ಸ್ಥಳೀಯವಾಗಿರುವ ಮತ್ತು ತೀವ್ರ ಇಳುವರಿ ನಷ್ಟಕ್ಕೆ ಕಾರಣವಾಗಿರುವ ಅಡಕೆ ಎಲೆ ಚುಕ್ಕೆ ರೋಗಕ್ಕೆ ಸಂಬಂಧಿಸಿದ ಸಂಶೋಧನೆ ಮತ್ತು ಪ್ರಯೋಗ ಆರಂಭಿಸಿದೆ.

**ನೆಲ್ಲಿಕಾಯಿ ಜ್ಯೂಸ್ ತಯಾರಿಕಾ ಯಂತ್ರ:** ಯಾವುದೇ ಔಪಚಾರಿಕ ಶಿಕ್ಷಣ ಹೊಂದಿರದ ಸ್ವಯಂ ತರಬೇತಿ ಪಡೆದ ಮೆಕ್ಯಾನಿಕ್ ಅನ್ನು ಕೆಪಿಪಿ ಪ್ರೇರೇಪಿಸಿದೆ. ಸಣ್ಣ ಬೆಟ್ಟದ ನೆಲ್ಲಿಯನ್ನು ಕತ್ತರಿಸಿ ಅದರ ರಸ ಹೊರತೆಗೆಯಲು ಎರಡು ಯಂತ್ರ ಗಳ ಆವಿಷ್ಕಾರ ನಡೆದಿದೆ. ಅಲ್ಲದೇ ನಿರಂತರ ಅಭಿಯಾನದ ಮೂಲಕ ನೆಲ್ಲಿ ಮರಗಳಿಗೆ ಸಂಬಂಧಿಸಿದಂತೆ ಸ್ಥಳೀಯರಲ್ಲಿ ಜಾಗೃತಿ ಮೂಡಿಸಲಾಗಿದೆ. ಪರಿಣಾಮ ಅರಣ್ಯ ಪ್ರದೇಶದಲ್ಲಿ ನೆಲ್ಲಿ ಮರಗಳನ್ನು ಕಡಿಯುವುದು ಕಡಿಮೆಯಾಗಿದೆ. ಅಷ್ಟೇ ಅಲ್ಲ, ರೈತರು ಮತ್ತು ಗ್ರಾಮಸ್ಥರು ಈಗ ನೆಲ್ಲಿ ಗಿಡಗಳನ್ನು ನೆಡಲು ಪ್ರಾರಂಭಿಸಿದ್ದಾರೆ. ಏಕೆಂದರೆ ಮಲೆನಾಡಿನ ಸಾಂಪ್ರದಾಯಿಕ ಬೆಳೆ ಅಡಕೆಗಿಂತ ಒಂದು ನೆಲ್ಲಿ ಮರದಿಂದ ಇಳುವರಿ ಹೆಚ್ಚು ಎಂಬುದನ್ನು ಕೆಪಿಪಿ ಯಶಸ್ವಿಯಾಗಿ ತೋರಿಸಿಕೊಟ್ಟಿದೆ.

ಕೆಪಿಪಿಯು ಕರ್ನಾಟಕದ ವಿವಿಧ ಜಿಲ್ಲೆಗಳ ವಿವಿಧ ಗ್ರಾಮಗಳಲ್ಲಿ ಹಲವಾರು ಸಭೆ, ಕಾರ್ಯಕ್ರಮಗಳನ್ನು ನಡೆಸಿದೆ. ಸಾವಯವ ಕೃಷಿಯ ಇಂದಿನ ಅಗತ್ಯತೆ, ಸಾವಯವ ಕೃಷಿಯ ಮೂಲ ತತ್ತ್ವಗಳು, ರಾಸಾಯನಿಕ ಗೊಬ್ಬರಗಳಿಗೆ ಪರ್ಯಾಯವಾದ ಗೊಬ್ಬರ, ಜೈವಿಕ ಗೊಬ್ಬರ, ಎರೆಹುಳ ಗೊಬ್ಬರ, ಕೀಟ ನಾಶಕ ಅಥವಾ ಕೀಟನಾಶಕಗಳಿಗೆ ಪರ್ಯಾಯವಾದ ಸಸ್ಯಾಧಾರಿತ ಕಷಾಯ, ಬೀಜ ಸಂಸ್ಕರಣೆ ಇತ್ಯಾದಿಗಳ ಬಗ್ಗೆ ತಿಳಿಸುತ್ತದೆ.

- ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ನಾಲ್ಕು ಸಮುದಾಯ ಬೀಜ ಬ್ಯಾಂಕ್ ಸ್ಥಾಪನೆ
- ರೈತರಿಗೆ ಮತ್ತು ಆಸಕ್ತರಿಗೆ ಮಳೆ ನೀರು ಕೊಯ್ಲು, ನೀರಿನ ಸಂರಕ್ಷಣೆ ಇತ್ಯಾದಿಗಳ ಕುರಿತು ಪ್ರಾಯೋಗಿಕ ತರಬೇತಿ
- ಸಾವಯವ ಕೃಷಿ ಮೂಲಕ 170ಕ್ಕೂ ಹೆಚ್ಚು ಸಾಂಪ್ರದಾಯಿಕ ಭತ್ತದ ತಳಿಗಳ ಸಂರಕ್ಷಣೆ
- ಅಕ್ಷಯ ಜೀವನ ಕಾರ್ಯಕ್ರಮ ಮೂಲಕ ಪ್ರತಿ ಗ್ರಾಮದಲ್ಲಿ 100 ಹೆಕ್ಟೇರ್ ಕೃಷಿ ಭೂಮಿಯನ್ನು ಸಾವಯವ ಕೃಷಿಗೆ ಪರಿವರ್ತಿಸುವ ಗುರಿ

## ಸಾವಯವ ಕೃಷಿ ಪರಿವಾರ

ಸಾವಯವ ಕೃಷಿ ಪರಿವಾರವು ಕೃಷಿ ಪ್ರಯೋಗ ಪರಿವಾರದ ಸಹೋದರ ಸಂಸ್ಥೆ. ಇದು ತಾಲೂಕು ಮಟ್ಟದ ಒಂದು ಒಕ್ಕೂಟವಾಗಿದೆ. ಈ ಪರಿವಾರವನ್ನು ಪ್ರತೀ ತಾಲೂಕಿನಲ್ಲಿ ರಚಿಸಿ, ನೋಂದಣಿ ಮಾಡಲಾಗಿದೆ. ಇದೊಂದು ಸ್ವತಂತ್ರವಾದ ಒಕ್ಕೂಟವಾಗಿದೆ. ಇಲ್ಲಿ ರೈತರೇ ಪದಾಧಿಕಾರಿ ಗಳಾಗಿದ್ದಾರೆ. ಪ್ರತಿ ತಾಲೂಕು ಮಟ್ಟದ ಪರಿವಾರದಿಂದ ಇಬ್ಬರು ಸದಸ್ಯರನ್ನು ಆಯ್ಕೆ ಮಾಡಿ ಜಿಲ್ಲಾ ಮಟ್ಟದ ಪರಿವಾರ ರಚಿಸಿ, ನೋಂದಣಿ ಮಾಡಲಾಗಿದೆ. ಈ ಜಿಲ್ಲಾ ಪರಿವಾರವು ತಾಲೂಕು ಪರಿವಾರಗಳಿಗೆ ನೆರವಾಗುತ್ತವೆ.

## ರಾಜ್ಯ ಸಾವಯವ ಕೃಷಿ ನೀತಿ

ಸಾವಯವ ಕೃಷಿ ಉತ್ತೇಜಿಸುವ ದಿಕ್ಕಿನಲ್ಲಿ ಭಾರತ ಸರ್ಕಾರವು 2000ರಲ್ಲಿ ಸಾವಯವ ಉತ್ಪಾದನೆ ಮತ್ತು ಗುಣಮಟ್ಟ ಮತ್ತು ಮಾನ್ಯತೆಗಾಗಿ ರಾಷ್ಟ್ರೀಯ ಕಾರ್ಯಕ್ರಮ ಪ್ರಾರಂಭಿಸಿತು.

ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಸಾವಯವ ಕೃಷಿ ಉತ್ತೇಜಿಸಲು ಕ್ರಮ ಕೈಗೊಂಡಿದ್ದು, ಮೊದಲ ಹಂತವಾಗಿ 2004ರಲ್ಲಿ ಕರ್ನಾಟಕ ರಾಜ್ಯ ಸಾವಯವ ಕೃಷಿ ನೀತಿ ರೂಪಿಸಿ, ಅಂಗೀಕರಿಸಿತು ಮತ್ತು ಪ್ರಕಟಿಸಿತು. ಈ ನೀತಿ ರೂಪಿಸುವಲ್ಲಿ ಕೃಷಿ ಪ್ರಯೋಗ ಪರಿವಾರ ಪ್ರಮುಖ ಪಾತ್ರ ವಹಿಸಿದೆ. ಅಲ್ಲದೇ 2005-2010ರ ನಡುವೆ ಕೆಪಿಪಿ ತನ್ನ ಸಾವಯವ ಗ್ರಾಮ ಕಾರ್ಯಕ್ರಮದಲ್ಲಿ ಕೃಷಿ ಇಲಾಖೆಯೊಂದಿಗೂ ಕಾರ್ಯನಿರ್ವಹಿಸಿದೆ.


08-11-2024
Hosadiganta Pg 06

---

ವಾಣಿಜ್ಯ ಬೆಳೆಯಿಂದ ನಷ್ಟ ಅನುಭವಿಸಿದ ರೈತ: ತರಬೇತಿ ಶಿಬಿರವೇ ಬೆಳೆ ಬೆಳೆಯಲು ಸ್ಫೂರ್ತಿ

# ಯುವ ರೈತನ ಕೈಹಿಡಿದ ಡ್ರ್ಯಾಗನ್ ಫ್ರೂಟ್

ಬಂಗಾರಪೇಟೆ ಎಚ್.ಎಲ್.ಆನಂದ್



08-11-2024
Hosadiganta Pg 12

**ಬಂಗಾರಪೇಟೆ:** ಟೊಮೆಟೊ, ಆಲೂಗಡ್ಡೆ ಸೇರಿದಂತೆ ಇತರ ವಾಣಿಜ್ಯ ಬೆಳೆಯನ್ನು ಬೆಳೆದು ಕೈಸುಟ್ಟುಕೊಂಡಿದ್ದ ಜ್ಯೋತೇನಹಳ್ಳಿ ಅಲಂಬಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನತ್ತಬೆಲೆ ಗ್ರಾಮದ ಯುವ ರೈತರೊಬ್ಬರು ಇದೀಗ ವಿದೇಶಿ ತಳಿ ಡ್ರ್ಯಾಗನ್ ಫ್ರೂಟ್ ಬೆಳೆದು ಕೈತುಂಬಾ ಹಣ ಸಂಪಾದನೆ ಮಾಡುತ್ತಿದ್ದಾರೆ.

ನತ್ತಬೆಲೆ ಯುವ ರೈತ ನಾಗೇಶ್ ಅವರು ಮೊದಲಿಗೆ ತಮ್ಮ ಜಮೀನಿನಲ್ಲಿ ಟೊಮೆಟೊ, ಆಲೂಗಡ್ಡೆ ಸೇರಿದಂತೆ ಇನ್ನಿತರ ವಾಣಿಜ್ಯ ಬೆಳೆ ಬೆಳೆದು, ಜೀವನ ನಡೆಸುತ್ತಿದ್ದರು ಆದರೆ, ಅದು ನಿರೀಕ್ಷಿತ ಮಟ್ಟದ ಲಾಭ ತಂದುಕೊಟ್ಟಿರಲಿಲ್ಲ, ಜೊತೆಗೆ ಕೆಲವೊಮ್ಮೆ ಅದರಿಂದ ನಷ್ಟವಾಗಿದ್ದೇ ಹೆಚ್ಚು, ಈ ಮಧ್ಯೆ ನಾಗೇಶ್ ಅವರು ಡ್ರ್ಯಾಗನ್ ಫ್ರೂಟ್‌ಬೆಳೆಯುವ ಮೂಲಕ ಲಾಭ ಕಂಡುಕೊಂಡಿದ್ದಾರೆ.

ಅಷ್ಟಕ್ಕೂ ಅವರು ಡ್ರ್ಯಾಗನ್ ಫ್ರೂಟ್ ಬೆಳೆಯಲು ಯಾವುದೇ ತರಬೇತಿ ಅಥವಾ ಶಿಬಿರಕ್ಕೆ ಹೋಗಿಲ್ಲ, ಬದಲಿಗೆ ತಮ್ಮ ಮೊಬೈಲ್‌ನಲ್ಲಿ ಯೂಟ್ಯೂಬ್ ವಿಡಿಯೊ ನೋಡಿಯೇ ಡ್ರ್ಯಾಗನ್ ಫ್ರೂಟ್ ಬೆಳೆಯುವ ವಿಧಾನವನ್ನು ಕಂಡುಕೊಂಡಿದ್ದಾರೆ, ಈ ಪ್ರಕಾರ ಯಲಹಂಕದಿಂದ ಪಿಂಕ್ ತಳಿಯ ಡ್ರ್ಯಾಗನ್ ಫ್ರೂಟ್ ಸಸಿಗಳನ್ನು ತಂದು ತಮ್ಮ ಮೂರು ಎಕರೆ ಪ್ರದೇಶದಲ್ಲಿ ನಾಟಿ ಮಾಡಿ, ಪೋಷಣೆ ಮಾಡಿದ್ದಾರೆ. ಈ ಮೂಲಕ ಲಕ್ಷಾಂತರ ರೂಪಾಯಿ ಆದಾಯ ಗಳಿಸಿದ ಅವರು ಇದೀಗ ಗ್ರಾಮಸ್ಥರ ಕೇಂದ್ರ ಬಿಂದುವಾಗಿದ್ದಾರೆ.

ತಾಲೂಕು ಟೊಮೆಟೊ ಸೇರಿದಂತೆ ಇನ್ನಿತರ ತರಕಾರಿ ಬೆಳೆಗಳಿಗೆ ಹೆಸರುವಾಸಿಯಾಗಿದ್ದು, ಇಲ್ಲಿನ ಜನರು ವಿವಿಧ ರೀತಿಯ ತರಕಾರಿಗಳನ್ನು ಬೆಳೆದು ಇತರೆ ರಾಜ್ಯಗಳಿಗೆ ಮಾರಾಟ ಮಾಡುವ ಮೂಲಕ ಮಾದರಿಯಾಗಿದ್ದಾರೆ.

ಒಮ್ಮೆ ಯಾವು ದಾದರೂ ರೈತ ಯಾವುದೇ ಒಂದು ಬೆಳೆ ಬೆಳೆದು ಲಾಭ ಮಾಡಿಕೊಂಡರೆ, ಇತರೆ ರೈತರು ಅದೇ ರೈತನನ್ನು ಅನುಸರಿಸಿ ರೈತ ಬೆಳೆದ ಬೆಳೆಯ ಬೆಲೆ ಕುಸಿತ ಸೇರಿದಂತೆ ಇನ್ನಿತರ ಕಾರಣಗಳಿಗಾಗಿ ರೈತ ನಷ್ಟಕ್ಕೊಳಗಾಗುತ್ತಾನೆ, ನಾಗೇಶ್ ಸಹ ತರಕಾರಿ ಬೆಳೆ ಬೆಳೆದು ಬೆಲೆ ಇಲ್ಲದೆ ನಷ್ಟಕ್ಕೆ ತುತ್ತಾಗಿದ್ದರು. ಆರಂಭದಲ್ಲಿ ಬೆಳೆಗೆ ಸುಮಾರು 15 ಲಕ್ಷ ಬಂಡವಾಳ ಹಾಕಿದ್ದ ರೈತ ಒಂದೇ ಕೊಯ್ಲಿಗೆ ಸುಮಾರು 5 ಲಕ್ಷದವರೆಗೆ ಆದಾಯ ಪಡೆಯುತ್ತಿದ್ದಾರೆ. ಬೆಳೆಯಲ್ಲಿ ಒಮ್ಮೆ ಇಳುವರಿ ಕಂಡರೆ 9 ತಿಂಗಳ ಕಾಲ ತಿಂಗಳಿಗೆ 4 ಬಾರಿ ಕೊಯ್ಲು ಬರುತ್ತದೆ, ಒಂದು ಎಕರೆಗೆ 1 ಟನ್‌ನಷ್ಟು ಇಳುವರಿ ಬರುತ್ತಿದೆ. ಪ್ರತಿ ಕೆ.ಜಿಗೆ 150 ರೂ ನಂತೆ ಬೆಂಗಳೂರು ಸೇರಿದಂತೆ ಇತರೆ ನಗರ ಪ್ರದೇಶಗಳಿಗೆ ನೇರವಾಗಿ ತೋಟದಿಂದಲೇ ಮಾರಾಟ ಮಾಡುತ್ತಿದ್ದಾರೆ. ನತ್ತಬೆಲೆ ಯುವ ರೈತ ನಾಗೇಶ್ ತೋಟಗಾರಿಕೆ ಇಲಾಖೆಯಿಂದ ನರೇಗಾ ಯೋಜನೆಯಲ್ಲಿ ಸಹಾಯಧನ ಪಡೆದು ಡ್ರ್ಯಾಗನ್ ಫ್ರೂಟ್ ಬೆಳೆದು ಯುವ ರೈತರಿಗೆ ಮಾದರಿಯಾಗಿದ್ದಾರೆ ಕೃಷಿ ಸಹಾಯಕ ನಿರ್ದೇಶಕ ಶಿವಾರೆಡ್ಡಿ ತಿಳಿಸಿದರು.

## ಆರ್ಥಿಕ ಮಟ್ಟ ಸುಧಾರಣೆ

ನತ್ತಬೆಲೆ ಯುವ ರೈತ ನಾಗೇಶ್ ಅವರು ಮೊದಲಿಗೆ ತಮ್ಮ ಜಮೀನಿನಲ್ಲಿ ಟೊಮೆಟೊ, ಆಲೂಗಡ್ಡೆ ಸೇರಿದಂತೆ ಇನ್ನಿತರ ವಾಣಿಜ್ಯ ಬೆಳೆ ಬೆಳೆದು, ಜೀವನ ನಡೆಸುತ್ತಿದ್ದರು ಆದರೆ, ಅದು ನಿರೀಕ್ಷಿತ ಮಟ್ಟದ ಲಾಭ ತಂದುಕೊಟ್ಟಿರಲಿಲ್ಲ, ಜೊತೆಗೆ ಕೆಲವೊಮ್ಮೆ ಅದರಿಂದ ನಷ್ಟವಾಗಿದ್ದೇ ಹೆಚ್ಚು, ಈ ಮಧ್ಯೆ ನಾಗೇಶ್ ಅವರು ಡ್ರ್ಯಾಗನ್ ಫ್ರೂಟ್ ಬೆಳೆಯುವ ಮೂಲಕ ಲಾಭ ಕಂಡುಕೊಂಡಿದ್ದಾರೆ.

## ಪ್ರತಿ ಕೊಯ್ಲಿಗೆ 5 ಲಕ್ಷ ರೂ. ಆದಾಯ

ಆರಂಭದಲ್ಲಿ ಬೆಳೆಗೆ ಸುಮಾರು 15 ಲಕ್ಷ ಬಂಡವಾಳ ಹಾಕಿದ್ದ ರೈತ ಒಂದೇ ಕೊಯ್ಲಿಗೆ ಸುಮಾರು 5 ಲಕ್ಷದವರೆಗೆ ಆದಾಯ ಪಡೆಯುತ್ತಿದ್ದಾರೆ. ಬೆಳೆಯಲ್ಲಿ ಒಮ್ಮೆ ಇಳುವರಿ ಕಂಡರೆ 9 ತಿಂಗಳ ಕಾಲ ತಿಂಗಳಿಗೆ 4 ಬಾರಿ ಕೊಯ್ಲು ಬರುತ್ತದೆ, ಒಂದು ಎಕರೆಗೆ 1 ಟನ್‌ನಷ್ಟು ಇಳುವರಿ ಬರುತ್ತಿದ್ದು, ಪ್ರತಿ ಕೆ.ಜಿಗೆ 150 ರೂ ನಂತೆ ಬೆಂಗಳೂರು ಸೇರಿದಂತೆ ಇತರೆ ನಗರ ಪ್ರದೇಶಗಳಿಗೆ ನೇರವಾಗಿ ತೋಟದಿಂದಲೇ ಮಾರಾಟ ಮಾಡುತ್ತಿದ್ದಾರೆ.